International Journal of Academic Research
ISSN: 2348-7666; Vol.9, Issue-2(3), February, 2022
Impact Factor: 6.023; Email: drtvramana@yahoo.co.in

# ನೂತನ ರಾಷ್ಟ್ರೀಯ ಶಿಕ್ಷಣ ನೀತಿ–2020 ನಲ್ಲಿ ಉನ್ನತ ಶಿಕ್ಷಣ ಹಾಗೂ ಯುವ ಜನತೆಯ ಪಾತ್ರ ಕುರಿತು ಒಂದು ವಿಶ್ಲೇಷಾಣಾತ್ಮಕ ಅಧ್ಯಯನ

ಪೂರ್ಣಿಮಾ.ಎಲ್
ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಮಹಾವಿದ್ಯಾಲಯ(ಸ್ವಾಯತ್ತ)
ಮಂಡ್ಯ

**ಸಾರಲೇಖ**

ಯಾವುದೇ ಒಂದು ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಣವ್ಯವಸ್ಥೆ ಬಹಳ ಪ್ರಮುಖ ಪಾತ್ರ ವಹಿಸುತ್ತದೆ. ರಾಷ್ಟ್ರ ರಚನೆ ಹಾಗೂ ರಾಷ್ಟ್ರೀಯತೆಯನ್ನು ಪ್ರಜೆಗಳಲ್ಲಿ ಮೂಢಿಸುವಲ್ಲಿ ಶಿಕ್ಷಣದ ಕಾರ್ಯ ಆಗಾಧವಾದುದು ಹಲವಾರು ರಾಷ್ಟ್ರಗಳು ಒಂದುಗೂಡಿ ಪ್ರಪಂಚವೆಂಬ ಒಂದು ಕುಟುಂಬದಲ್ಲಿ ಬೆರೆತು ಒಂದನ್ನೊಂದು ಅವಲಂಬಿಸಿ ಕಾರ್ಯನಿರ್ವಹಿಸುತ್ತಿವೆ. ಇಂದಿನ ವೈವಿಧ್ಯಮಯ ಜಗತ್ತಿನಲ್ಲಿ ಪ್ರತಿಯೊಂದು ರಾಷ್ಟ್ರಕ್ಕೂ ಅದರದೇ ಆದ ಒಂದು ನಿಶ್ಚಿತ ಗುರಿ ಇರುತ್ತದೆ.ಆ ರಾಷ್ಟ್ರೀಯ ಗುರಿಸಾಧನೆಗಾಗಿ ಅಲ್ಲಿನ ರಾಷ್ಟ್ರೀಯರು ತಮ್ಮ ಸಂಸ್ಕೃತಿ, ಭಾಷೆ ವಿಶಿಷ್ಟವಾದ ಜೀವನಶೈಲಿಗಳನ್ನು ರೂಪಿಸಿಕೊಂಡಿರುತ್ತಾರೆ. ಹಲವಾರು ಧರ್ಮ, ಭಾಷೆ, ಜಾತಿ, ಸಾಂಸ್ಕೃತಿಕ ವೈವಿಧ್ಯತೆಗಳನ್ನು ರೂಢಿಸಿಕೊಂಡಿರುವ ಜನಾಂಗವು ಒಂದು ರಾಷ್ಟ್ರವನ್ನು ರೂಪಿಸುತ್ತದೆ. ಆ ಜನಾಂಗವು ಒಂದು ನಿರ್ಧಿಷ್ಟ ಗಡಿಪ್ರದೇಶದಲ್ಲಿ ವಾಸಿಸುವ ಪ್ರಜಾಸಮೂಹವಾಗಿರುತ್ತದೆ. ಈ ರೀತಿಯ ಪ್ರಜಾಸಮೂಹವು ಸಮಾನಧರ್ಮ, ಸಂಸ್ಕ್ರತಿ, ಭಾಷೆ, ವೇಷಭೂಷಣ, ಜೀವನಶೈಲಿ, ತಮ್ಮ ಸಂತತಿಯ ಸರ್ವಾಂಗೀಣ ವಿಕಾಸಕ್ಕಾಗಿ ರೂಪಿಸಿದ ಒಂದು ವಿಶಿಷ್ಟ ಶಿಕ್ಷಣ ಪದ್ಧತಿಯನ್ನು ಹೊಂದಿರುತ್ತದೆ. ಈ ರೀತಿಯ ಶಿಕ್ಷಣವು ಇತಿಹಾಸ, ಪುರಾತನ ಪರಂಪರೆ, ತಾಂತ್ರಿಕ ಹಾಗೂ ವೈಜ್ಞಾನಿಕ ಕ್ಷೇತ್ರದಲ್ಲಿನ ಬೆಳವಣಿಗೆ'ಗಳು, ನೂತನ ಆವಿಷ್ಕಾರಗಳನ್ನು ಒಳಗೊಂಡಿರಬೇಕು. ಆ ನಿಟ್ಟಿನಲ್ಲಿ ಹೊಸ ಶಿಕ್ಷಣ ನೀತಿ ಯಲ್ಲಿನ ಯುವಜನತೆಯ ಹಾಗೂ ಉನ್ನತ ಶಿಕ್ಷಣದ ಬಗೆಗಿನ ವಿಶ್ಲೇಷಣೆಯನ್ನು ಗಮನಿಸೋಣ.

ನೂತನ ರಾಷ್ಟ್ರೀಯ ಶಿಕ್ಷಣ ನೀತಿ–2020 ಭಾರತದಲ್ಲಿನ 3 ನೇ ಹೊಸ ಶಿಕ್ಷಣ ನೀತಿಯಾಗಿದೆ. ಸ್ವತಂತ್ರ ಭಾರತದ 3ನೇ ಹೊಸ ಶಿಕ್ಷಣ ನೀತಿಗೆ ಜುಲೈ 29,2020 ರಂದು ಕೇಂದ್ರ ಸರ್ಕಾರದ ಸಚಿವ ಸಂಪುಟ ಅನುಮೋದನೆ ನೀಡಿದೆ. ಸುಮಾರು 34 ವರ್ಷಗಳ ಬಳಿಕ ನಮ್ಮ ದೇಶಕ್ಕೆ ಇಸ್ರೋ ಮಾಜಿ ಅಧ್ಯಕ್ಷ ಡಾ.ಕೃಷ್ಣಸ್ವಾಮಿ ಕಸ್ತೂರಿರಂಗನ್ ರವರ ಅಧ್ಯಕ್ಷತೆಯಲ್ಲಿ 3 ನೇ ಹೊಸ ಶಿಕ್ಷಣ ನೀತಿಯ ಕರಡು ಪ್ರತಿ ಪ್ರಕಟವಾಗಿ ಶಿಕ್ಷಣ ತಜ್ಞರ ಮತ್ತು ಸಾರ್ವಜನಿಕರ ಚಿಂತನ ಮಂಥನಕ್ಕೆ ದಾರಿಮಾಡಿಕೊಟ್ಟಿದೆ. ಈ ಹೊಸ ಶಿಕ್ಷಣ ನೀತಿ ಭಾರತವನ್ನು 'ಜಾಗತಿಕ ಜ್ಞಾನದ ಮಹಾಶಕ್ತಿಯತ್ತ' ಕೊಂಡೊಯ್ಯುವ ಉದ್ದೇಶವನ್ನು ಹೊಂದಿದೆ. ಜ್ಞಾನಭಂಡಾರವನ್ನು ವಿಸ್ತರಿಸಲು ಮತ್ತು ಹೊಸ ಸವಾಲುಗಳನ್ನು ಎದುರಿಸಲು ಮಾರ್ಪಾಡುಗಳು ತೀರಾ ಅಗತ್ಯ.ಈಗಿನ ಶಿಕ್ಷಣ ವ್ಯವಸ್ಥೆ ಕೂಡ ಕಾಲಕಾಲಕ್ಕೆ ಬದಲಾವಣೆಯ ಗಾಳಿಗೆ ಒಡ್ಡಿಕೊಳ್ಳಬೇಕಿತ್ತು. ಆದರೆ ಕಳೆದ 34 ವರ್ಷಗಳಿಂದ ಬದಲಾವಣೆಯ ಪರ್ವ ಬರಲೇ ಇಲ್ಲ. ಆದರೆ ಪ್ರಸ್ತುತ ಭಾರತದಲ್ಲಿನ ಹೊಸ ಶಿಕ್ಷಣ ನೀತಿ–2020 ಒಂದು ಹೊಸ ಪರ್ವವನ್ನೇ ಸೃಷ್ಟಿಸಿದೆ.

International Journal of Academic Research
ISSN: 2348-7666; Vol.9, Issue-2(3), February, 2022
Impact Factor: 6.023; Email: drtvramana@yahoo.co.in

ವ್ಯಕ್ತಿತ್ವ ನಿರ್ಮಾಣಕ್ಕೆ ಅಡಿಗಲ್ಲು

ಮಾತೃ ಭಾಷೆಯಲ್ಲಿ ಕಲಿಕೆಗೆ ಆದ್ಯತೆ

ಪ್ರಾದೇಶಿಕ ಅಥವಾ ಸ್ಥಳೀಯ ಭಾಷೆಯಲ್ಲಿಯೇ ವಿಜ್ಞಾನದ ಕಲಿಕೆ

ಶೈಕ್ಷಣಿಕ ಕ್ರೆಡಿಟ್ ಬ್ಯಾಂಕ್ ಸ್ಥಾಪನೆ

ಬಹುವಿಷಯಗಳ ಶಿಕ್ಷಣಕ್ಕೆ ಆದ್ಯತೆ

ಬಹುನಿರ್ಗಮನ ವ್ಯವಸ್ಥೆ

ಬಹುವಿಷಯಗಳ ಶಿಕ್ಷಣಕ್ಕೆ ಆದ್ಯತೆ

ಒಂದೇ ಕೇಂದ್ರೀಯ ನಿಯಂತ್ರಕ ವ್ಯವಸ್ಥೆ

ಜಿಲ್ಲೆಗೊಂದು ಬಹುವಿಷಯ ಕಾಲೇಜು

ಅಂತಿಮವಾಗಿ ಹೇಳುವುದಾದರೆ ದೇಶದ ಉನ್ನತ ಶಿಕ್ಷಣದ ಗುಣಮಟ್ಟದ ಬೆಳವಣಿಗೆಯ ದಾರಿಗೆ ಅಡ್ಡಲಾಗಿರುವುದು ಶ್ರೇಷ್ಠ ವಿಚಾರಗಳ ಕೊರತೆ ಅಲ್ಲ, ಸಮಸ್ಯೆ ಇರುವುದು ಉನ್ನತ ಶಿಕ್ಷಣಸೌಧದ ಮೂಲಭೂತ ರಚನೆಯಲ್ಲಿ.ಈ ಮೂಲಭೂತ ರಚನೆಗಳನ್ನು ಸರಿಯಾಗಿ ಗಮನಿಸಿಕೊಂಡು ಮುಂದುವರೆಯಬೇಕು. ಇಲ್ಲವಾದರೆ ಸೌಧ ನಿರ್ಮಾಣವಾದರೂ ಕಂಬಗಳು, ನೆಲಗಟ್ಟು ಹಳತಾಗಿಯೇ ಉಳಿಯುತ್ತವೆ. ರಾಜ್ಯದ ವಿಶ್ವವಿದ್ಯಾನಿಲಯಗಳು ಗುಣಾತ್ಮಕ ಶಿಕ್ಷಣ ಮತ್ತು ಸಂಶೋಧನೆಗೆ ಸಂಬಂಧಿಸಿದ ಬಿಕ್ಕಟ್ಟುಗಳನ್ನು ಎದುರಿಸುತ್ತವೆ. ವಿಶೇಷವಾಗಿ ವಿದ್ಯಾರ್ಥಿಗಳು ಶಿಕ್ಷಕರು ಮತ್ತು ಆಡಳಿತಗಾರರಲ್ಲಿ ಬೌದ್ಧಿಕ ಮಹತ್ವಾಕಾಂಕ್ಷೆಯ ಕೊರತೆ ಎದ್ದು ಕಾಣುತ್ತಿದ್ದು ಅವೆಲ್ಲವುಗಳನ್ನು 'ಹೊಸಶಿಕ್ಷಣ ನೀತಿ' ನಿರ್ವಹಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ.

## ವ್ಯಕ್ತಿತ್ವ ನಿರ್ಮಾಣಕ್ಕೆ ಅಡಿಗಲ್ಲು

ಹೊಸ ಶಿಕ್ಷಣ ನೀತಿ ಕೇವಲ ಶಿಕ್ಷಣ ವ್ಯವಸ್ಥೆಯನ್ನು ಬದಲಿಸುವ ಕಾನೂನು ಅಲ್ಲ.ಇದು ದೇಶದ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯನ್ನು ಬದಲಿಸುವ ಮಾರ್ಗಸೂಚಿಯೂ ಆಗಿದೆ'. ಹೊಸ ಪೀಳಿಗೆಯ ಮಕ್ಕಳ ಭವಿಷ್ಯ ಹೇಗಿರಬೇಕೆಂಬ ದೂರದೃಷ್ಟಿಯನ್ನು ಇಟ್ಟುಕೊಂಡು ರಚಿಸಿರುವ ನೀಲನಕ್ಷೆ. ಭಾರತೀಯ ಸಾಂಪ್ರಾದಾಯಿಕ ಶಿಕ್ಷಣದ ಮೂಲ ಉದ್ದೇಶ ವ್ಯಕ್ತಿತ್ವ ನಿರ್ಮಾಣವೇ ಹೊರತು ಅಕ್ಷರಗಳನ್ನು, ಸಂಖ್ಯೆಗಳನ್ನು ಕಲಿಸುವುದಲ್ಲ, ಈ ರೀತಿಯ ವ್ಯಕ್ತಿತ್ವ ನಿರ್ಮಾಣವೇ ಈಗಿನ ಶಿಕ್ಷಣ ವ್ಯವಸ್ಥೆಯಲ್ಲಿಲ್ಲ ಎಂಬುದು ಬಹುಕಾಲದಿಂದಲೂ ಇದೆ. ಹೀಗಾಗಿ ಸಮಾಜದಲ್ಲಿ ನಡೆಯುವ ಅಪರಾಧ ಚಟುವಟಿಕೆಗಳು, ಭ್ರಷ್ಟಾಚಾರ, ಸಮಾಜಘಾತುಕ ಚಟುವಟಿಕೆಗಳು ಮುಂತಾದವುಗಳಿಗೆ ಶಿಕ್ಷಣ ವ್ಯವಸ್ಥೆಯನ್ನೇ ಗುರಿಯಾಗಿಸಲಾಗತ್ತದೆ.ಆದರೆ ಹೊಸ ಶಿಕ್ಷಣ ನೀತಿಯು ವ್ಯಕ್ತಿತ್ವ ನಿರ್ಮಾಣಕ್ಕೆ ಆದ್ಯತೆ ನೀಡುತ್ತದೆ.ಈ ನೀತಿಯಡಿಯಲ್ಲಿ ಆಧುನಿಕ ಶಿಕ್ಷಣ ನೀಡುವ ಜೊತೆಗೆ ಗುರು–ಶಿಷ್ಯ ಪರಂಪರೆ ಪದ್ಧತಿಯ ಬಲವಾದ ಸತ್ವವನ್ನು ತುಂಬಿಸುವ ಪ್ರಯತ್ನ ಮಾಡಲಾಗಿದೆ.

International Journal of Academic Research
ISSN: 2348-7666; Vol.9, Issue-2(3), February, 2022
Impact Factor: 6.023; Email: drtvramana@yahoo.co.in

**ಮಾತೃ ಭಾಷೆಯಲ್ಲಿ ಕಲಿಕೆಗೆ ಆದ್ಯತೆ**

ಶಿಕ್ಷಣ ಕ್ಷೇತ್ರದಲ್ಲಿ ಮಾತೃ ಅಥವಾ ಸ್ಥಳೀಯ ಭಾಷೆಗೆ ಆದ್ಯತೆ ದೊರೆಯುತ್ತಿಲ್ಲ ಎಂಬುದು ಬಹಳ ಹಿಂದಿನಿಂದಲೂ ಕೇಳಿಬರುತ್ತಿರುವ ವಿಷಯವಾಗಿದೆ. ಹಾಗಾಗಿ ಹೊಸ ಶಿಕ್ಷಣ ನೀತಿಯಲ್ಲಿ 5 ನೇ ತರಗತಿಯವರೆಗೆ ಮಾತೃಭಾಷೆಯಲ್ಲಿಯೇ ಕಲಿಸಬೇಕು ಎಂಬ ಅಂಶವನ್ನು ಸೇರಿಸಲಾಗಿದೆ. ಸಾಧ್ಯವಾದರೆ 8 ನೇ ತರಗತಿಯವರೆಗೂ ಮಾತೃಭಾಷೆಯಲ್ಲಿಯೇ ಶಿಕ್ಷಣ ನೀಡಿ ಎಂಬದನ್ನು ಕೂಡ ಶಿಕ್ಷಣ ನೀತಿಯಲ್ಲಿ ತಿಳಿಸಲಾಗಿದೆ. ಆಂಗ್ಲಭಾಷಾ ವ್ಯಾಮೋಹದಿಂದ ಮಾತೃಭಾಷೆಯ ಕಡೆಗಣಣೆಯಾಗಿರುವ ಈ ಕಾಲದಲ್ಲಿ ಮಾತೃಭಾಷೆಗೆ ಒತ್ತು ನೀಡುವ ಶಿಕ್ಷಣ ನೀತಿ ಸಕಾಲಿಕವಾಗಿದೆ. ಆದರೆ ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರಕ್ಕಿಂತಲೂ ಆಯಾ ರಾಜ್ಯ ಸರ್ಕಾರಗಳ ಜವಬ್ದಾರಿ ದೊಡ್ಡದು.

**ಪ್ರಾದೇಶಿಕ ಅಥವಾ ಸ್ಥಳೀಯ ಭಾಷೆಯಲ್ಲಿಯೇ ವಿಜ್ಞಾನದ ಕಲಿಕೆ**

ವಿಜ್ಞಾನವನ್ನು ಇಂಗ್ಲಿಷ್ ಬದಲು ಮಾತೃಭಾಷೆಯಲ್ಲಿಯೇ ಕಲಿಸಬೇಕು ಎಂಬುದು ಬಹಳ ಹಿಂದಿನಿಂದಲೂ ಕೇಳಿಬರುತ್ತಿದೆ.ಆದರೆ ವಿಜ್ಞಾನ ವಿಷಯ ಮಕ್ಕಳಿಗೆ ಸುಲಭವಾಗಿ ಅರ್ಥವಾಗುವಂತೆ ಮಾಡಲು ಗುಣಮಟ್ಟದ ಪಠ್ಯಪುಸ್ತಕಗಳನ್ನು ರಚಿಸಬೇಕು. ವಿಜ್ಞಾನದಲ್ಲಿ ಇಂಗ್ಲಿಷ್ ಪದಗಳನ್ನು ಸ್ಥಳೀಯ ಭಾಷೆಗೆ ಅನುವಾದಿಸುವುದು ಬಹಳ ಕಷ್ಟ.ಆದರೆ ಅದನ್ನು ಸಾಧ್ಯವಾಗಿಸಿ ಗುಣಮಟ್ಟದ ಪಠ್ಯಪುಸ್ತಕಗಳನ್ನು ರಚಿಸಬೇಕು ಎಂದು ಹೊಸ ಶಿಕ್ಷಣ ನೀತಿ ಹೇಳುತ್ತದೆ.ಈ ರೀತಿಯ ಪುಸ್ತಕಗಳನ್ನು ರಚಿಸಿದರೆ ಸುಲಭ ಕಲಿಕೆ ಮತ್ತು ಭಾಷೆಯ ಬೆಳವಣಿಗೆ ಸಾಧ್ಯವಾಗಲಿದೆ. ಹಾಗೂ ಮುದ್ರಣ ಮಾಧ್ಯಮವೂ ಕೂಡ ಅಭಿವೃದ್ಧಿಯಾಗುತ್ತದೆ.

ಶಾಲಾ ಪೂರ್ವಕಲಿಕೆಯಿಂದ, ಪ್ರೌಢಶಿಕ್ಷಣದವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೇಂಬುದು ಹೊಸ ಶಿಕ್ಷಣ ನೀತಿಯ ಒಂದು ಅಂಶವಾಗಿದೆ. ಈ ಪರಿಷ್ಕರಣೆ ವಿದ್ಯಾರ್ಥಿಗಳ ಜವಬ್ದಾರಿ ಅಥವಾ ಹೊಣೆಗಾರಿಕೆಯನ್ನು ಹೆಚ್ಚಿಸಿದರೆ, ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಮೇಲೆ ವ್ಯಯ ಮಾಡಬೇಕಾಗಿದ್ದ ಮೊತ್ತದ ಹೊರೆಯನ್ನು ಕಡಿಮೆ ಮಾಡಲಿದೆ ಎಂಬುದು ಸಮಾಧಾನಕರ ಅಂಶವಾಗಿದೆ.

**ಶೈಕ್ಷಣಿಕ ಕ್ರೆಡಿಟ್ ಬ್ಯಾಂಕ್ ಸ್ಥಾಪನೆ**

ನೂತನ ಶಿಕ್ಷಣ ನೀತಿಯಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು, ಅವರು ಗಳಿಸಿದ ಕ್ರೆಡಿಟ್‌ಗಳ ಮೂಲಕ ಅಳೆಯಲಾಗುತ್ತದೆ.ವಿವಿಧ ಉನ್ನತ ಶಿಕ್ಷಣಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಗಳಿಸಿದ ಕ್ರೆಡಿಟ್‌ಗಳನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸಲು 'ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್' ಸ್ಥಾಪನೆಯಾಗಲಿದೆ.ಇದರಲ್ಲಿ ಸಂಗ್ರಹವಾದ ಕ್ರೆಡಿಟ್ ಸ್ಕೋರ್‌ಗಳನ್ನು ಬೇರೊಂದು ವಿಷಯದಲ್ಲಿ ಗಳಿಸಿದ ಸ್ಕೋರ್ ಜತೆ ಸೇರಿಸಲು ಅಥವಾ ಬೇರೊಂದು ವಿಷಯಕ್ಕೆ ವರ್ಗಾವಣೆ ಮಾಡಲು ಸಾಧ್ಯವಿದ್ದು,ಅಂತಿಮ ವರ್ಷದ ಪದವಿಗೆ ಅವುಗಳನ್ನು ಒಟ್ಟಾರೆಯಾಗಿ ಪರಿಗಣಿಸಲಾಗುವುದು. ಇದು ಒಂದು ನೂತನ ಕ್ರಾಂತಿಯೇ ಆಗಿದೆ.

ಮಾಧ್ಯಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೂ ವಿದ್ಯಾರ್ಥಿಗಳಲ್ಲಿ ವೃತ್ತಿಪರತೆ ಮತ್ತು ಕೌಶಲಭಿವೃದ್ಧಿಯನ್ನು ವೃದ್ಧಿಗೊಳಿಸಲು ಹೊಸ ಶಿಕ್ಷಣ ನೀತಿ ರೂಪುರೇಷೆಗಳನ್ನು ಹೊರತಂದಿರುವುದು ನಮ್ಮ ಶಿಕ್ಷಣ ವ್ಯವಸ್ಥೆ ಪಾಶ್ಚಿಮಾತ್ಯ ರಾಷ್ಟ್ರಗಳ ಶಿಕ್ಷಣ ಮಟ್ಟಕ್ಕೆ ಸರಿಸಾಟಿಯಾಗಿ ಬೆಳೆಯಲು ಅನುವು ಮಾಡಿಕೊಡಬಹುದು ಎಂದು ಹಲವು ಶಿಕ್ಷಣ ತಜ್ಞರು

ಅಭಿಪ್ರಾಯಪಟ್ಟಿದ್ದಾರೆ. ಕೃತಕ ಬುದ್ಧಿವಂತಿಕೆ, ಕೋಡಿಂಗ್ ಮತ್ತು ಕಂಪ್ಯೂಟರ್ ಆಧಾರಿತ ವಿವಿಧ ತಂತ್ರಾಂಶಗಳ ಕಲಿಕೆ ಮತ್ತು ಅಭಿವೃದ್ಧಿಗೆ 'ಹೊಸ ಶಿಕ್ಷಣ ನೀತಿ–2020' ಹೆಚ್ಚು ಒತ್ತು ನೀಡಿರುವುದರಿಂದ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದೆ ಎಂದು ಹೇಳಬಹುದು.

ಇನ್ನು ಮುಂದೆ ನಮ್ಮ ವಿಶ್ವವಿದ್ಯಾನಿಲಯಗಳು ಒಇಖಿಗ (Multidisplinary Education and Research Universities ) ಅಂದರೆ ಬಹುಶಿಸ್ತೀಯ ಶಿಕ್ಷಣ ಮತ್ತು ಸಂಶೋಧನಾ ವಿಶ್ವವಿದ್ಯಾನಿಲಯಗಳಾಗಿ ಮಾರ್ಪಾಟು ಹೊಂದಿ ಭೌತಶಾಸ್ತ್ರ, ಇತಿಹಾಸ, ವಾಣಿಜ್ಯಶಾಸ್ತ್ರ, ಕನ್ನಡ, ಗಣಕವಿಜ್ಞಾನ ಮುಂತಾದ ಪ್ರಾಧ್ಯಾಪಕರುಗಳು ಒಂದೇ ಕಟ್ಟಡದ ವಿವಿಧ ಕೊಠಡಿಯಲ್ಲಿ ಕೆಲಸ ಮಾಡುವ ವಾತಾವರಣ ಸೃಷ್ಟಿಯಾಗುವಂತೆ ಹೊಸ ಶಿಕ್ಷಣ ನೀತಿಯ ಆಮೂಲಾಗ್ರ ಬದಲಾವಣೆ ತಂದಿದೆ.

**ಬಹುನಿರ್ಗಮನ ವ್ಯವಸ್ಥೆ**

ಹೊಸ ಶಿಕ್ಷಣ ನೀತಿಯು ಬಹುನಿರ್ಗಮನ ವ್ಯವಸ್ಥೆಯನ್ನು (Multi Exit System) ಜಾರಿಗೆ ತಂದಿದೆ. ಅಂದರೆ ವಿದ್ಯಾರ್ಥಿಗಳು ಪದವಿಗೆ ಸೇರಿದ ಒಂದು ವರ್ಷದ ನಂತರ ಕಾರಣಾಂತರಗಳಿಂದ ಕಾಲೇಜಿನಿಂದ ಹೊರ'ಬಂದರೆ, ಈಗಿನ ವ್ಯವಸ್ಥೆಯಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನುತೀರ್ಣರಾದವರು ಅಥವಾ ಪದವಿ ಪಡೆಯಲು ವಿಫಲರಾದವರು ಎಂದು ಕರೆಯಲಾಗತ್ತಿತ್ತು. ಆದರೆ ಹೊಸ ಶಿಕ್ಷಣ ನೀತಿಯು ಒಂದು ವರ್ಷ ಪದವಿ ಪೂರೈಸಿದವರಿಗೆ ಪ್ರಮಾಣಪತ್ರ ನೀಡುತ್ತದೆ. ಎರಡು ವರ್ಷ ಪೂರೈಸಿದವರಿಗೆ ಡಿಪ್ಲೊಮಾ ಪ್ರಮಾಣಪತ್ರ ನೀಡಲಾಗುತ್ತದೆ. ಮೂರು ವರ್ಷ ಪೂರೈಸಿದವರಿಗೆ ಪದವಿ ಪ್ರಮಾಣಪತ್ರ ನೀಡಲಾಗುತ್ತದೆ, ವಿದ್ಯಾರ್ಥಿಯು ನಾಲ್ಕು ವರ್ಷಗಳನ್ನು ಪೂರೈಸಿದರೆ ಪದವಿಯ ಜೊತೆ ಸಂಶೋಧನಾ ಪ್ರಮಾಣಪತ್ರವನ್ನು ನೀಡಲಾಗುತ್ತದೆ.ಈ ವ್ಯವಸ್ಥೆಯು ವಿದ್ಯಾರ್ಥಿಗಳ ಪ್ರಸ್ತುತ ಉದ್ಯೋಗ ಮಾರುಕಟ್ಟೆಯಲ್ಲಿ ಬಹುಸ್ತರದ ಕೆಲಸಗಳನ್ನು ಪಡೆಯಲು ಸಹಕಾರಿಯಾಗುತ್ತದೆ.

**ಬಹುವಿಷಯಗಳ ಶಿಕ್ಷಣಕ್ಕೆ ಆದ್ಯತೆ**

ಪ್ರಸ್ತುತ ಒಂದೇ ವಿಷಯದಲ್ಲಿ ಶಿಕ್ಷಣ ನೀಡುತ್ತಿರುವ ಶೈಕ್ಷಣಿಕ ಸಂಸ್ಥೆಗಳು ಉದಾ: ತಾಂತ್ರಿಕ ಶಿಕ್ಷಣಸಂಸ್ಥೆಗಳು, ತಾಂತ್ರಿಕ ವಿಶ್ವವಿದ್ಯಾನಿಲಯಗಳು ಇನ್ನು ಮುಂದೆ ಬಹುವಿಷಯಗಳ ಶಿಕ್ಷಣ ಸಂಸ್ಥೆಗಳಾಗಿ ಮಾರ್ಪಾಡಾಗುತ್ತವೆ. ಜೊತೆಗೆ ಉನ್ನತ ಶಿಕ್ಷಣದಲ್ಲಿ ವಿಷಯವಾರು ಬಹು ಆಯ್ಕೆ ವ್ಯವಸ್ಥೆಯನ್ನು ಹೊಸ ಶಿಕ್ಷಣ ನೀತಿ ನೀಡಿರುವುದರಿಂದ ಈಗಿರುವ ಕಲಾ, ವಾಣಿಜ್ಯ, ವಿಜ್ಞಾನ ಎಂಬ ಕೃತಕ ವಿಭಾಗಗಳು ಮಾಯಾವಾಗಿ ವಿದ್ಯಾರ್ಥಿಗಳು ತಮ್ಮ ಆಸಕ್ತಿಯ ಆಧಾರದ ಮೇಲೆ ಪದವಿಯನ್ನು ಪೂರೈಸುತ್ತಾರೆ. ಅಂದರೆ ರಾಜ್ಯಶಾಸ್ತ್ರ ಅಧ್ಯಯನ ಮಾಡುವ ವಿದ್ಯಾರ್ಥಿಗೆ ಭೌತಶಾಸ್ತ್ರವನ್ನು ಅಭ್ಯಾಸ ಮಾಡುವ ಆಸಕ್ತಿ ಇದ್ದರೆ, ಆ ವಿಷಯವನ್ನು ಅಧ್ಯಯನ ಮಾಡಲು ಹೊಸ ಶಿಕ್ಷಣ ನೀತಿ ಅವಕಾಶ ಮಾಡಿಕೊಡುತ್ತದೆ. ಹಾಗೆಯೇ ಎಂಜಿನಿಯರಿಂಗ್ ವಿದ್ಯಾರ್ಥಿಯು ಇತಿಹಾಸ ಓದಬಹುದು.ಇದರಿಂದ ಯಾವುದೇ ವಿದ್ಯಾರ್ಥಿ ತನ್ನ ಶೈಕ್ಷಣಿಕ ಹಿನ್ನೆಲೆಯನ್ನು ಲೆಕ್ಕಿಸದೇ ಯಾವುದೇ ವಿಷಯವನ್ನು ಓದಲು ಅವಕಾಶವಾಗುತ್ತದೆ.

**ಒಂದೇ ಕೇಂದ್ರೀಯ ನಿಯಂತ್ರಕ ವ್ಯವಸ್ಥೆ**

ದೇಶಾದ್ಯಂತ ಇರುವ ಉನ್ನತ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ಯುಜಿಸಿ ಮಾದರಿಯಲ್ಲಿ 'ಭಾರತಿಯ ಉನ್ನತ ಶಿಕ್ಷಣ ಮಂಡಳಿ' ಸ್ಥಾಪನೆಯಾಗಲಿದೆ. ಶಿಕ್ಷಕರ ತರಬೇತಿ ಸೇರಿದಂತೆ ಎಲ್ಲಾ ರೀತಿಯ ಶಿಕ್ಷಣಕ್ಕೆ ಇದು ಏಕಗವಾಕ್ಷಿ ನಿಯಂತ್ರಣ ಪ್ರಾಧಿಕಾರವಾಗಿರುತ್ತದೆ. ಇದರಿಂದ ಉನ್ನತ ಶಿಕ್ಷಣ ಸಂಸ್ಥೆಗಳು ಏಕರೂಪತೆಯಿಂದ ಕಾರ್ಯನಿರ್ವಹಿಸಲು ಅವಕಾಶವಾಗುತ್ತದೆ.

**ಜಿಲ್ಲೆಗೊಂದು ಬಹುವಿಷಯ ಕಾಲೇಜು**

2030 ರ ವೇಳೆಗೆ ದೇಶದ ಪ್ರತಿಯೊಂದು ಜಿಲ್ಲೆಯಲ್ಲೂ ದೊಡ್ಡಮಟ್ಟದ ಬಹುವಿಷಯಗಳ ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ. 2040 ರ ವೇಳೆಗೆ ದೇಶದ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಬಹುವಿಷಯಗಳ ಶಿಕ್ಷಣ ಸಂಸ್ಥೆಗಳಾಗಿ ಮಾರ್ಪಡಿಸಿ, ಪ್ರತಿಯೊಂದು ವಿಷಯದಲ್ಲೂ ಕನಿಷ್ಟ 3000 ವಿದ್ಯಾರ್ಥಿಗಳನ್ನು ಹೊಂದಿರುವಂತೆ ಮಾಡುವ ಗುರಿ ಹೊಂದಿದೆ. ಇದರಿಂದ ಆಯಾ ಸ್ಥಳೀಯ ಯುವ ಪ್ರತಿಭೆಗಳು ಬೆಳಕಿಗೆ ಬರಲು ಅವಕಾಶವಾಗುವುದಲ್ಲದೆ, ಶಿಕ್ಷಣ ಕ್ಷೇತ್ರದ ವೈಶಾಲ್ಯತೆಯ ಮಟ್ಟ ಬೃಹದಾಕಾರವಾಗುವುದರಲ್ಲಿ ಸಂದೇಹವಿಲ್ಲ.

**ಸಾಮಾನ್ಯ ಪ್ರವೇಶ ಪರೀಕ್ಷೆ**

ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಪ್ರವೇಶಕ್ಕೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (NTA)ಏಕರೀತಿಯ ಸಾಮಾನ್ಯ ಪರೀಕ್ಷೆಯನ್ನು ನಡೆಸಲಿದೆ.ಇದರಿಂದ ವಿದ್ಯಾರ್ಥಿಗಳು ಯಾವುದೇ ವಿಶ್ವವಿದ್ಯಾನಿಲಯವನ್ನಾದರೂ ತಮ್ಮ ಜ್ಞಾನದಾಹದ ದಣಿವು ನೀಗಿಸಿಕೊಳ್ಳಲು ಆಯ್ಕೆಮಾಡಿಕೊಳ್ಳುವುದಕ್ಕೆ ಅನುವು ಮಾಡಿಕೊಟ್ಟಿರುವುದು ನೂತನ ಶಿಕ್ಷಣನೀತಿಯ ಪ್ರಮುಖಾಂಶವಾಗಿದೆ.

ಹೊಸಶಿಕ್ಷಣ ನೀತಿ – 2020 ಜಾರಿಯಾದ ನಂತರ ತೇರ್ಗಡೆ ಹೊಂದುವ ವಿದ್ಯಾರ್ಥಿಗಳ ಅಂಕಪಟ್ಟಿಗಳಲ್ಲಿ ಗ್ರೇಡ್ ಮತ್ತು ಅಂಕಗಳ ಜೊತೆಗೆ ವಿದ್ಯಾರ್ಥಿಯ ಕೌಶಲದ ವಿಧ ಮತ್ತು ಸಾಮರ್ಥ್ಯವನ್ನು ನಮೂದಿಸಲಾಗುತ್ತದೆ.ಇದು ವಿದ್ಯಾರ್ಥಿಯು ಉದ್ಯೋಗ ಪಡೆಯಲು ಮುಂದಿನ ದಿನಗಳಲ್ಲಿ ಹೆಚ್ಚು ಸಹಕಾರಿಯಾಗುತ್ತದೆ. ಭಾರತೀಯ ವಿದೇಶಾಂಗ ಇಲಾಖೆಯ ಅಂಕಿಅಂಶಗಳ ಪ್ರಕಾರ ಪ್ರತಿವರ್ಷ ಸುಮಾರು 7.5 ಲಕ್ಷ ಭಾರತೀಯ ವಿದ್ಯಾರ್ಥಿಗಳು ಉನ್ನತ ವ್ಯಾಸಾಂಗಕ್ಕಾಗಿ ಪ್ರಪಂಚದ ವಿವಿಧ ದೇಶಗಳಿಗೆ ತೆರಳುತ್ತಾರೆ.ಅಲ್ಲಿ ವಿದ್ಯಾಭ್ಯಾಸ ಮುಗಿದ ನಂತರ ಬಹುಪಾಲು ವಿದ್ಯಾರ್ಥಿಗಳು ಹೊರದೇಶದಲ್ಲೇ ಉದ್ಯೋಗ ಪಡೆದು ಆಯಾಯ ದೇಶಗಳಲ್ಲೇ ನೆಲೆಸುತ್ತಾರೆ.ಇದರಿಂದ ನಮ್ಮ ದೇಶದಿಂದ " ಪ್ರತಿಭಾ ಪಲಾಯನ" (Brain Drain ) ಸಮಸ್ಯೆ ಉಂಟಾಗುತ್ತಿದ್ದು,ದೇಶದ ಆರ್ಥಿಕ ಮತ್ತು ಶೈಕ್ಷಣಿಕ ವ್ಯವಸ್ಥೆಯ ಮೇಲೆ ದೊಡ್ಡ ಹೊಡೆತ ಬೀಳುತ್ತಿದೆ.ಈ ಸಮಸ್ಯೆಯನ್ನು ಹೋಗಲಾಡಿಸಲು ವಿದೇಶಗಳ ಪ್ರತಿಷ್ಟಿತ 100 ವಿಶ್ವವಿದ್ಯಾನಿಲಯಗಳು ಭಾರತದಲ್ಲಿ ತಮ್ಮ ಅಧ್ಯಯನ ಕೇಂದ್ರಗಳನ್ನು ತೆರೆಯಲು 'ಹೊಸ ಶಿಕ್ಷಣ ನೀತಿ–2020' ಅನುವು ಮಾಡಿಕೊಟ್ಟಿದೆ.ಇದರಿಂದ ಕೋಟ್ಯಾಂತರ ಮೌಲ್ಯದ ವಿದೇಶೀ ವಿನಿಮಯ ಭಾರತದಲ್ಲೇ ಉಳಿಯುತ್ತದೆ.ಜೊತೆಗೆ ಪ್ರತಿಭಾ ಪಲಾಯನದ ಬದಲು ಪ್ರತಿಭೆಯ ಲಾಭ (Brain gain) ನಮ್ಮ ದೇಶಕ್ಕೆ ದೊರೆಯುತ್ತದೆ.ಈ ವಿದೇಶಿ ವಿಶ್ವವಿದ್ಯಾನಿಲಯಗಳು ವಿಧಿಸುವ ಪ್ರವೇಶ ಶುಲ್ಕ ಮತ್ತು ಪರೀಕ್ಷಾ ಶುಲ್ಕಗಳ ಗರಿಷ್ಟ

ಮಿತಿಯನ್ನು ಸರ್ಕಾರವೇ ನಿಗಧಿಪಡಿಸುವುದರಿಂದ ಬಡ ಮತ್ತು ಮಧ್ಯಮವರ್ಗದ ವಿದ್ಯಾರ್ಥಿಗಳು ತಮ್ಮ ಉನ್ನತ ವ್ಯಾಸಾಂಗವನ್ನು ಪ್ರಪಂಚದ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಿಂದ ಪಡೆಯಬಹುದಾಗಿದೆ. ಮುಂದುವರೆದು ಭಾರತದ ವಿಶ್ವವಿದ್ಯಾನಿಲಯಗಳು ಕೂಡ ತಮ್ಮ ಅಧ್ಯಯನ ಕೇಂದ್ರಗಳನ್ನು ಪ್ರಪಂಚದ ವಿವಿಧ ದೇಶಗಳಲ್ಲಿ ಸ್ಥಾಪಿಸಲು 'ಹೊಸ ಶಿಕ್ಷಣ ನೀತಿ–2020' ಅವಕಾಶ ಕಲ್ಪಿಸಿಕೊಟ್ಟಿದೆ. ಇದರಿಂದ ಮತ್ತಷ್ಟು ವಿದೇಶೀ ವಿನಿಮಯ ಭಾರತಕ್ಕೆ ಹರಿದು ಬರುವುದರಲ್ಲಿ ಸಂದೇಹವೇ ಇಲ್ಲ.ಈ ನೀತಿಯು ಭಾರತದಲ್ಲಿ ಶಿಕ್ಷಣವನ್ನು ಅಂತರರಾಷ್ಟ್ರೀಕರಿಸಲು ಪ್ರಸ್ತಾಪಿಸಿದೆ. ವಿದೇಶಿ ವಿದ್ಯಾನಿಲಯಗಳು ಈಗ ಭಾರತದಲ್ಲಿ ಕ್ಯಾಂಪಸ್‌ಗಳನ್ನು ಸ್ಥಾಪಿಸಬಹುದು.ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯವನ್ನು ಶಿಕ್ಷಣ ಸಚಿವಾಲಯ ಎಂದು ಮರುನಾಮಕರಣ ಮಾಡಿರುವುದರಿಂದ ಶೈಕ್ಷಣಿಕ ಕ್ಷೇತ್ರ ವೈಶಾಲ್ಯತೆ ಆಗಾಧವಾಗಿ ಬೆಳೆಯಲು ಸಾಧ್ಯವಾಗುತ್ತದೆ.

ಹೊಸ ಶಿಕ್ಷಣ ನೀತಿ ಪೂರ್ವ ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣದ ಗುರಿಯನ್ನು ಹೊಂದಿದೆ. ಮತ್ತು 2025 ರ ವೇಳೆಗೆ ಎಲ್ಲರಿಗೂ ಅಡಿಪಾಯದ ಸಾಕ್ಷರತೆಯನ್ನು ಒದಗಿಸುತ್ತದೆ. ಭಾರತದ ಪ್ರಧಾನಮಂತ್ರಿ ನೇತೃತ್ವದಲ್ಲಿರುವ ರಾಷ್ಟ್ರೀಯ ಶಿಕ್ಷಾ ಆಯೋಗ್ ಎಂಬ ಹೊಸದಾದ ಅತ್ಯುನ್ನತ ನಿಯಂತ್ರಣ ಸಂಸ್ಥೆಯನ್ನು ರಚಿಸಲು ಹೊಸ ಶಿಕ್ಷಣ ನೀತಿ ಉದ್ದೇಶಿಸಿದೆ.

**ವಿಮರ್ಶಾತ್ಮಕ ವಿಶ್ಲೇಷಣೆ**

ಹೊಸ ಶಿಕ್ಷಣ ನೀತಿಯ ಅನೇಕ ಅಂಶಗಳಿಗೆ ದೇಶಾದ್ಯಂತ ವಿಮರ್ಶಾತ್ಮಕ ಟೀಕೆಗಳು ವ್ಯಕ್ತವಾಗಿವೆ. ಶಿಕ್ಷಣದಲ್ಲಿ ಖಾಸಗಿಯವರಿಗೆ ಹೆಚ್ಚಿನ ಮನ್ನಣೆ ನೀಡಿ ಶಿಕ್ಷಣವನ್ನು ವಾಣಿಜ್ಯೀಕರಣಗೊಳಿಸಲಾಗುತ್ತಿದೆ. ದೇಶದ ಬಹುತ್ವ ಪರಂಪರೆಗೆ ಹೊಸ ಶಿಕ್ಷಣ ನೀತಿ ಧಕ್ಕೆ ತರುತ್ತದೆ.ಉನ್ನತ ಶಿಕ್ಷಣದಲ್ಲಿ ಬಹುಸ್ತರದ ಪ್ರವೇಶ ಮತ್ತು ನಿರ್ಗಮನ ಪದ್ಧತಿಯ ಶಿಕ್ಷಣ ವ್ಯವಸ್ಥೆಯನ್ನು ವಿದ್ಯಾರ್ಥಿಗಳು ಗಂಭೀರವಾಗಿ ಪರಿಗಣಿಸುವುದಿಲ್ಲ.

ಆದರೆ ಹೊಸ ಶಿಕ್ಷಣ ನೀತಿಯನ್ನು ಖಖಖ ಕಾನ್ಪುರದ ನಿರ್ದೇಶಕ ಅಭಯ್‌ಶಂಕರ್ ಬೆಂಬಲಿಸಿದರೆ, IIT ದೆಹಲಿ ನಿರ್ದೇಶಕ ವಿ.ರಾಮಗೋಪಾಲ್‌ರಾವ್ ಅವರು ಭಾರತದಲ್ಲಿನ ' ಮೊರಿಲ್ ಚಳುವಳಿ' ಎಂದು ಕರೆದರು. ಹಾಗೂ JNUSU ನ ಐಶೆ ಘೋಷ್ ರವರು ಹೊಸ ನೀತಿಯಡಿಯಲ್ಲಿ ಇಂಟರ್ನ್‌ಶಿಪ್ ಮಾಡುವುದರಿಂದ ಬಾಲ ಕಾರ್ಮಿಕ ಪದ್ಧತಿಗೆ ಕಾರಣವಾಗಲಿದೆ ಎಂದು ಹೇಳಿದ್ದಾರೆ. ಶೈಕ್ಷಣಿಕ ರಚನೆ, ವಾಣೀಜ್ಯೀಕೃತ ಶಿಕ್ಷಣ ಮತ್ತು ಸ್ವತಂತ್ರ ಸಂಶೋಧನಾ ಚತುವ ಟಿಕೆಯನ್ನು ದುರ್ಬಲಗೊಳಿಸುತ್ತಿದೆ ಎಂದು ಟೀಕಿಸಲಾಗಿದೆ

'ಅರ್ಹತೆ ಆಧಾರಿತ' ಕಾಲೇಜು ಪ್ರವೇಶ ಮಾನದಂಡಗಳು ಮೀಸಲಾತಿ ಮತ್ತು ದೇಶದಲ್ಲಿ ಅನೇಕರು ಎದುರಿಸುತ್ತಿರುವ ಜಾತಿ ಆಧಾರಿತ ತಾರತಮ್ಯ ಮತ್ತು ದ'ಬ್ಬಾಳಿಕೆಯನ್ನು ಗಣನೆಗೆ ತೆಗೆದುಕೊಳ್ಳಲ್ಲಿಲ್ಲ ಎಂಬುದು ಟೀಕೆಯಾಗಿದೆ.

ಸಂವಿಧಾನದ ಪ್ರಕಾರ ಶಿಕ್ಷಣವು ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡಕ್ಕೂ ಸಂಬಂಧಿಸಿದ 'ಸಹವರ್ತಿ' ಪಟ್ಟಿಯಲಿದೆ, ಆದರೂ ಈ ನೀತಿಯಲ್ಲಿ ರಾಜ್ಯಗಳ ಶೈಕ್ಷಣಿಕ ಸ್ವಾಯತ್ತತೆಗೆ ಧಕ್ಕೆ ತರಲಾಗಿದೆ.

ಈ ರೀತಿ ಅನೇಕ ರಚನಾತ್ಮಕ ಟೀಕೆಗಳು ವ್ಯಕ್ತವಾಗಿದ್ದರೂ ಕೂಡ,ಇದನ್ನು ಅನುಷ್ಠಾನ ಮಾಡುವ ಸಂದರ್ಭದಲ್ಲಿ ಇವುಗಳನ್ನು ಪರಿಶೀಲಿಸಿ, ಸಾಧ್ಯಾಸಾಧ್ಯತೆಗಳೊಂದಿಗೆ ಜಾರಿಗೆ ತಂದರೆ ಭಾರತೀಯ ಶಿಕ್ಷಣ ಕ್ಷೇತ್ರದಲ್ಲಿ ಒಂದು ಹೊಸ ಅಧ್ಯಾಯವನ್ನೇ ಸೃಷ್ಟಿಸಬಹುದು.

ಅಂತಿಮವಾಗಿ ಹೇಳುವುದಾದರೆ ದೇಶದ ಉನ್ನತ ಶಿಕ್ಷಣದ ಗುಣಮಟ್ಟದ ಬೆಳವಣಿಗೆಯ ದಾರಿಗೆ ಅಡ್ಡಲಾಗಿರುವುದು ಶ್ರೇಷ್ಠ ವಿಚಾರಗಳ ಕೊರತೆ ಅಲ್ಲ,ಸಮಸ್ಯೆ ಇರುವುದು ಉನ್ನತ ಶಿಕ್ಷಣಸೌಧದ ಮೂಲಭೂತ ರಚನೆಯಲ್ಲಿ.ಈ ಮೂಲಭೂತ ರಚನೆಗಳನ್ನು ಸರಿಯಾಗಿ ಗಮನಿಸಿಕೊಂಡು ಮುಂದುವರೆಯಬೇಕು. ಇಲ್ಲವಾದರೆ ಸೌಧ ನಿರ್ಮಾಣವಾದರೂ ಕಂಬಗಳು, ನೆಲಗಟ್ಟು ಹಳತಾಗಿಯೇ ಉಳಿಯುತ್ತವೆ.

ದೇಶಾದದ್ಯಂತ ಹಲವು ಪದವಿ ಕಾಲೇಜುಗಳಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ ಕನಿಷ್ಠ ಮೂಲಭೂತ ಸೌಕರ್ಯಗಳ ತೀವ್ರ ಕೊರತೆ ಇದೆ. ವಿಶ್ವವಿದ್ಯಾನಿಲಯದ ಆರಂಭಕ್ಕೆ ಏನು ಮೂಲಭೂತ ಸೌಕರ್ಯ ಹಾಗೂ ಮಾನವ ಸಂಪನ್ಮೂಲಬೇಕು ಎನ್ನುವುದಕ್ಕೆ ಶಾಸನಬದ್ಧವಾದ ಅಗತ್ಯತೆಗಳು ಇಲ್ಲ.

ವಿಶ್ವವಿದ್ಯಾನಿಲಯಗಳು ಹಾಗೂ ಸರ್ಕಾರಗಳ ನಡುವೆ ಹೊಂದಾಣಿಕೆಯ ಕೊರತೆಯಿಂದಲೂ ಹಲವು ಸಮಸ್ಯೆಗಳು ಹುಟ್ಟಿಕೊಂಡಿವೆ. ರಾಜ್ಯದ ವಿಶ್ವವಿದ್ಯಾನಿಲಯಗಳು ಗುಣಾತ್ಮಕ ಶಿಕ್ಷಣ ಮತ್ತು ಸಂಶೋಧನೆಗೆ ಸಂಬಂಧಿಸಿದ ಬಿಕ್ಕಟ್ಟುಗಳನ್ನು ಎದುರಿಸುತ್ತವೆ. ವಿಶೇಷವಾಗಿ ವಿದ್ಯಾರ್ಥಿಗಳು ಶಿಕ್ಷಕರು ಮತ್ತು ಆಡಳಿತಗಾರರಲ್ಲಿ ಬೌದ್ಧಿಕ ಮಹತ್ವಾಕಾಂಕ್ಷೆಯ ಕೊರತೆ ಎದ್ದು ಕಾಣುತ್ತಿದ್ದು ಅವೆಲ್ಲವುಗಳನ್ನು 'ಹೊಸಶಿಕ್ಷಣ ನೀತಿ' ನಿರ್ವಹಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ.

**References:**


- Krisna Atul(29 july 2020)NEP 2020 Highlights:School and Higher Education NDTV,Retrived 31 july 2020
- Kumar,Suchitra 31 july 2020 " New Education policy'':Times Now,Retrived 9 August 2020.
- New Education Policy on Higher Edcation-Manoj K Sakena,Anu.G.S
- India's National Education policy 2020 an overview-Rusen Kumar,Dr.Rana Singh
- ರಾಷ್ಟ್ರೀಯ ಶಿಕ್ಷಣ ನೀತಿ 2020 ಶಿಕ್ಷಣ ಸಚಿವಾಲಯ,ಭಾರತ ಸರ್ಕಾರ
- ನವಭಾರತಕ್ಕೆ ಶೈಕ್ಷಣಿಕ ಕ್ರಾಂತಿ–ವಿಜಯವಾಣಿ
- ರಾಷ್ಟ್ರೀಯ ಶಿಕ್ಷಣ ನೀತಿ 2020–ಡಾ.ನಾಗರಾಜ ಆರ್,ಡಾ.ಪ್ರವೀಣ್ ಚಂದ್ರ.ಎನ್
- ಕರ್ನಾಟಕ ಶಿಕ್ಷಣ ಅಧಿನಿಯಮ,1983 ಮತ್ತು ಕನ್ನಡ ಭಾಷಾ ಕಲಿಕೆ ಅಧಿನಿಯಮ,2015